## 29. ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ಅರ್ಜಿಗೆ ಪಿಎಂ ಸ್ವನಿಧಿ ಆ್ಯಪ್

ಬೀದಿಬದಿ ವ್ಯಾಪಾರಿಗಳಿಗೆ ಸಾಲ ಒದಗಿಸುವ ಕೇಂದ್ರದ ಆತ್ಮನಿರ್ಭರ ನಿಧಿ ಯೋಜನೆಯಡಿ ಅರ್ಜಿ ಸಲ್ಲಿಸಲು 'ಪಿಎಂ ಸ್ವನಿಧಿ' ಎನ್ನುವ ಮೊಬೈಲ್ ಆ್ಯಪ್ ಬಿಡುಗಡೆಯಾಗಿದೆ. ಈಗಾಗಲೇ 1,54,000 ಅರ್ಜಿದಾರರ ಪೈಕಿ 48 ಸಾವಿರ ಮಂದಿಗೆ ಸಾಲ ಮಂಜೂರಾಗಿದೆ. ಶೇ.7ರ ಬಡ್ಡಿದರದಲ್ಲಿ ಗರಿಷ್ಠ ರೂ.10 ಸಾವಿರ ಸಾಲ ನಿಗದಿತ ಬ್ಯಾಂಕುಗಳ ಮೂಲಕ ಸಿಗಲಿದ್ದು, 2020ರ ಮಾರ್ಚ್ 24ರೊಳಗೆ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ನೋಂದಾಯಿತ ಬೀದಿ ವ್ಯಾಪಾರಸ್ಥರಿಗೆ ಸಾಲ ನೆರವು ಸೌಲಭ್ಯ ಸಿಗಲಿದೆ.

50 ಲಕ್ಷ ಮಂದಿಗೆ ಸಾಲ ಒದಗಿಸಲು ರೂ.5 ಸಾವಿರ ಕೋಟಿ ಬಜೆಟ್ ನಿಗದಿಯಾಗಿದ್ದು, ಪ್ರತಿ ತಿಂಗಳ ಕಂತನ್ನು ಒಂದು ವರ್ಷದೊಳಗೆ ಪಾವತಿಸಬೇಕು. 2022ರ ಮಾ.31ರ ತನಕ ಯೋಜನೆ ಅಸ್ತಿತ್ವದಲ್ಲಿ ಇರಲಿದ್ದು, ನಿಗದಿತ ಅವಧಿಯೊಳಗೆ ಸಾಲ ಚುಕ್ತಾ ಮಾಡಿದರೆ ಪಾವತಿಸಿದ ಶೇ.7ರ ಬಡ್ಡಿ ಸಹಾಯಧನದ ರೂಪದಲ್ಲಿ ಖಾತೆಗೆ ಜಮೆಯಾಗಲಿದೆ. ಕ್ಲುಪ್ತವಾಗಿ ಸಾಲ ತೀರಿಸಿ ಮತ್ತೆ ರೂ.20 ಸಾವಿರ ಸಾಲ ಪಡೆಯುವ ಅವಕಾಶವೂ ಇದೆ. ಸಾಲದ ಕಂತಿನ ಡಿಜಿಟಲ್ ಪಾವತಿಗೆ ಪ್ರತಿ ತಿಂಗಳು ರೂ. 100 ಪ್ರೋತ್ಸಾಹಧನ ಖಾತೆಗೆ ವರ್ಗಾವಣೆಯಾಗಲಿದೆ. ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ನೋಂದಾಯಿತ ಬೀದಿಬದಿ ವ್ಯಾಪಾರಿಗಳು ತಮ್ಮ ಮೊಬೈಲ್ ಸಂಖ್ಯೆಯನ್ನು ಆಧಾರ್ ಲಿಂಕ್ ಮಾಡಿರಬೇಕು. ಸೀಮಿತ ಅವಧಿಯೊಳಗೆ ಯಾವುದೇ ಗ್ಯಾರಂಟಿ, ಜಾಮೀನು, ಅಡಮಾನದ ಅಗತ್ಯವಿಲ್ಲದೇ ಸಾಲದ ಮೊತ್ತವನ್ನು ಸರಳ ದಾಖಲೆ ಮೂಲಕ ಅಪ್‌ಲೋಡ್ ಮಾಡಬಹುದು.

ಆಧಾರ:ವಿಜಯಕರ್ನಾಟಕ, ದಿನಾಂಕ:21.07.2020